# ಸಂಪಾದಕೀಯ

# ಪರಮ ಅನುಭಾವಿಯಾಗಿ ಶ್ರೀರಾಮಕೃಷ್ಣರು

ಅನುಭವ–ಅನುಭಾವ

೧೮೮೨ ನೆಯ ಇಸವಿ ಫೆಬ್ರವರಿ ತಿಂಗಳ ಒಂದು ದಿನ. ಮಾಸ್ಟರ್ ಮಹಾಶಯನು ತನ್ನ ಸ್ನೇಹಿತ ಸಿಧುವಿನೊಡನೆ ಮೊದಲ ಬಾರಿಗೆ ಶ್ರೀರಾಮಕೃಷ್ಣರ ಬಳಿಗೆ ಬಂದಿದ್ದಾನೆ, ಪರಮಹಂಸರ ಕೊಠಡಿಯನ್ನು ಪ್ರವೇಶಿಸಿದ್ದಾನೆ. ಅಲ್ಲಿ ಬೇರೆ ಯಾರೂ ಇಲ್ಲ. ಶ್ರೀರಾಮಕೃಷ್ಣರು ಅವರನ್ನು ಮಾತನಾಡಿಸಿದರು. ಆದರೆ ಅವರು ಆಗಾಗ ಅನ್ಯಮನಸ್ಕರಾಗುತ್ತಿದುದನ್ನು ಮಾಸ್ಟರ್ ಗಮನಿಸುತ್ತಾನೆ. ರಾಮಕೃಷ್ಣ ವಚನವೇದದಲ್ಲಿ ಈ ಕುರಿತು ಹೀಗೆ ಅವನು ಬರೆದಿದ್ದಾನೆ:

"ಅದಕ್ಕೆ 'ಭಾವ' ಎಂದು ಹೆಸರು ಎಂಬುದನ್ನು ಕ್ರಮೇಣ ಮಾಸ್ಟರ್ ಅರಿತುಕೊಂಡ. ಅದು ಗಾಳ ಹಾಕಿ ಮೀನು ಹಿಡಿಯಲು ಕುಳಿತಿರುವವನ ಮಾನಸಿಕ ಅವಸ್ಥೆಯ ಹಾಗೆ; ಮೀನು ಎರೆ ತಿನ್ನಲು ಆರಂಭಿಸಿದಾಗ ಬೆಂಡು ಅಲುಗಲು ಆರಂಭಿಸುತ್ತದೆ; ಮೀನು ಹಿಡಿಯುವವನು ಬಹಳ ಎಚ್ಚರಿಕೆಯಿಂದ ಗಾಳದ ಕಡ್ಡಿಯನ್ನು ಬಲವಾಗಿ ಹಿಡಿದು ಆ ಬೆಂಡಿನ ಕಡೆಗೇ ಏಕಾಗ್ರಚಿತ್ತನಾಗಿ ನೋಡತೊಡಗುತ್ತಾನೆ; ಆಗ ಆತ ಬೇರೆ ಯಾರೊಡನೆಯೂ ಮಾತನಾಡಲೊಲ್ಲ. ಪರಮಹಂಸರದೂ ಅದೇ ತೆರದ ಮಾನಸಿಕ ಅವಸ್ಥೆ" (ಶ್ರೀರಾಮಕೃಷ್ಣ ವಚನವೇದ, ಪೂರ್ವಾರ್ಧ, ಪುಟ ೩).

ಇದನ್ನೇ ಅನುಭಾವವೆನ್ನುವುದು. ಇದು ಅನುಭವವನ್ನು ಮೀರಿದ ಸ್ಥಿತಿ. ಸಾಮಾನ್ಯವಾಗಿ ಅನುಭವವೆನ್ನುವುದು ಇಂದ್ರಿಯಗಳ ಮೂಲಕ ಪಡೆಯುವುದು. **ಇಂದ್ರಿಯಾತೀತ ಅನುಭವವೇ 'ಅನುಭಾವ.'** ಅನುಭಾವದ ಅನುಭೂತಿಯು ಉನ್ನತವಾದುದು, ಪ್ರಖರವಾದುದು, ಸಮಗ್ರವಾದುದು, ವಾಸ್ತವಿಕವಾದುದು, ದಿವ್ಯವಾದುದು (ಬೆಳಕಿನಿಂದ ಕೂಡಿದ್ದು) ಮತ್ತು ಪರಿಶುದ್ಧವಾದುದು.

**ಅನುಭಾವವು ಐಕ್ಯಸ್ಥಿತಿ.** ಅನುಭವದಲ್ಲಿ ಹಲವನ್ನು ಕಂಡರೆ, ಅನುಭಾವದಲ್ಲಿ ಒಂದೇ ಆಗಿರುವುದನ್ನು ಅನುಭಾವಿಗಳು ಕಂಡುಕೊಳ್ಳುತ್ತಾರೆ. ಅದನ್ನು ಸೂಚ್ಯವಾಗಿ ವಚನಕಾರ ಚನ್ನಬಸವೇಶ್ವರನು ಹೀಗೆ ವಿವರಿಸುತ್ತಾನೆ:

**ತನು ಸೋಂಕಿ ತನು ನಷ್ಟವಾಯಿತ್ತು**
**ಮನ ಸೋಂಕಿ ಮನ ನಷ್ಟವಾಯಿತ್ತು**
**ಧನ ಸೋಂಕಿ ಧನ ನಷ್ಟವಾಯಿತ್ತು**
**ಭಾವ ಸೋಂಕಿ ಭಾವ ನಷ್ಟವಾಯಿತ್ತು**
**ಅಂತಾದ ಕಾರಣ ಕೂಡಲಚನ್ನಸಂಗಯ್ಯಾ**
**ಶರಣನಂದು ನಷ್ಟವಾಗಿ, ನಿಮ್ಮೊಳೇಕಾರ್ಥವಾಯಿತ್ತು**

ಶರಣನು ತನ್ನ ತನು ಮನ ಭಾವಗಳನ್ನು ಕಳೆದುಕೊಂಡು ಆ ಶಿವನಲ್ಲಿ **ಏಕಾರ್ಥವಾಗುವ ಐಕ್ಯಸ್ಥಿತಿಯೇ ಅನುಭಾವ** ಎಂದು ಇದರ ಅರ್ಥ. ಈ ಐಕ್ಯತೆಯನ್ನು ವಿಭಿನ್ನಸ್ತರಗಳಲ್ಲಿ ಅನುಭವಿಸುವ ಸಾಮರ್ಥ್ಯವಾದ **ಸಮಾನದೃಷ್ಟಿಯನ್ನೂ** ಅನುಭಾವವು ನೀಡುತ್ತದೆ. ಹೀಗಾಗಿ ಐಕ್ಯತೆಯನ್ನು ಅನುಭವಿಸಿದ ಸಿದ್ಧನು ಅರಿವಿನ ಕೆಳಗಿನ ಆಯಾಮಗಳಲ್ಲಿಯೂ ಅದನ್ನು ಹುಡುಕುತ್ತಾನೆ, ಅದರಲ್ಲಿ ಸಫಲನೂ ಆಗುತ್ತಾನೆ.

ಈ ಬಗೆಯ **ಅನುಭಾವವು ಅಪಾರವಾದ ಆನಂದವನ್ನೀಯುತ್ತದೆ.** ಅದು ಬಾಹ್ಯ ಸುಖದಂತಲ್ಲ. ಬಾಹ್ಯದ ಬಂಧನವನ್ನು ಬಿಡಿಸಿಕೊಂಡು, ಸ್ವಾತಂತ್ರ್ಯವನ್ನು ಗಳಿಸಿದಾಗಿನ ಆನಂದ. ಬಂಧನವು ದುಃಖ; ಬಿಡುಗಡೆ ಆನಂದ. **ಅನುಭಾವ ಅಂತಹ ಬಿಡುಗಡೆಯ ಸ್ಥಿತಿ.**

ಆ ಆನಂದವನ್ನು ಎಲ್ಲೆಲ್ಲಿಯೂ ಕಾಣುವ ಸಹಜ ಸ್ವಭಾವ ಅನುಭಾವಿಯಲ್ಲಿ ಮೂಡಿಬಂದು, ಅದು ಪರಿಶುದ್ಧ ಪ್ರೇಮವಾಗಿ ಮೊಳೆಯುತ್ತದೆ. ಪ್ರೇಮವು ಆನಂದವನ್ನು ಅನುಭವಿಸುವ ಸ್ಥಿತಿ. ಪ್ರೇಮವೆಂಬುದು ಆನಂದವು ಪ್ರಕಟವಾಗುವ ವಿಧಾನ. **ಅನುಭಾವಿಯ ಅಂತರಾಳದ ಆನಂದ–ಪ್ರೇಮಗಳು ವಿಶ್ವವ್ಯಾಪಿಯಾಗಿರುತ್ತವೆ, ಪ್ರಪಂಚವನ್ನೇ ಆಲಿಂಗಿಸುತ್ತವೆ.**

**ಅನುಭಾವವು ತತ್ತ್ವಶಾಸ್ತ್ರಕ್ಕೂ, ಧರ್ಮಕ್ಕೂ ಮೂಲ.** ಬ್ರಿಟಾನಿಕಾ ಆಂಗ್ಲ ವಿಶ್ವಕೋಶದಲ್ಲಿನ Mysticism ಪದದ ವ್ಯಾಖ್ಯೆ ಹೀಗಿದೆ: "ಮಾನವನ ಮನಸ್ಸು ವಸ್ತುಗಳ ದಿವ್ಯಸತ್ವವನ್ನು ಅಥವಾ ಆತ್ಯಂತಿಕ ಸತ್ಯವನ್ನು ತಿಳಿದುಕೊಳ್ಳುವ ಮತ್ತು ಅತ್ಯಂತ ಶ್ರೇಷ್ಠವಾದುದರ ಜೊತೆಗೆ ತನ್ಮಯತೆಯನ್ನು ಹೊಂದಿ ಆನಂದಿಸುವ ಸಂದರ್ಭಗಳಲ್ಲಿ ಈ ಪದವನ್ನು ಉಪಯೋಗಿಸಲಾಗುತ್ತದೆ. ಮೊದಲನೆಯದು ಅನುಭಾವದ ತಾತ್ತ್ವಿಕ ಬಗೆಯಾದರೆ, ಎರಡನೆಯದು ಧಾರ್ಮಿಕ ಬಗೆ. ಮೊದಲನೆಯದು ಸೈದ್ಧಾಂತಿಕ ಮತ್ತು ಊಹೆ, ಎರಡನೆಯದು ಅನುಷ್ಠಾನಪ್ರದವಾದುದು." ಇದರರ್ಥ, ತತ್ತ್ವಶಾಸ್ತ್ರದ ಧ್ಯೇಯವಾದ ಜ್ಞಾನದ ಪ್ರಕಾಶವನ್ನೂ, ಧರ್ಮ ಅಥವಾ ಆಧ್ಯಾತ್ಮಿಕತೆಯ ಧ್ಯೇಯವಾದ ಭಗವಂತನೊಡನೆ ಪರಿಪೂರ್ಣ ಐಕ್ಯಭಾವವನ್ನೂ ತಂದುಕೊಡುವ ಮಹಾನ್ ಅನುಭವವೇ ಅನುಭಾವ.

ಒಂದು ಅನುಭವವು ಅನುಭಾವವಾಗಬೇಕಾದರೆ ಕನಿಷ್ಠ ಮೇಲಿನ ಗುಣಲಕ್ಷಣಗಳನ್ನು ಹೊಂದಿರಲೇಬೇಕು. ಅಂತಹ ಅನುಭವಗಳನ್ನು ಪಡೆಯುವವನೇ ಅನುಭಾವಿ. ಈ ದೃಷ್ಟಿಯಲ್ಲಿ ಪರಮ ಅನುಭಾವಿಯಾದ ಶ್ರೀರಾಮಕೃಷ್ಣರು ಮೇಲಿನ ಲಕ್ಷಣಗಳನ್ನು ತಮ್ಮ ದಿವ್ಯ ಅನುಭವಗಳಲ್ಲಿ ಹೇಗೆ ತೋರ್ಪಡಿಸಿಕೊಂಡಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದೇ ಒಂದು ರೋಚಕ ಜ್ಞಾನಯಾತ್ರೆ.

**ವೈಜ್ಞಾನಿಕ ಮತ್ತು ಆನುಭಾವಿಕ ಚೌಕಟ್ಟುಗಳ ಮಧ್ಯೆ ಸಂಬಂಧವನ್ನು ಇಂದ್ರಿಯಾತೀತ ನೆಲೆಯ ಆಚೆ ಕಲ್ಪಿಸುವುದು ಸಾಧ್ಯವೇ? ಬಹುಶಃ ನಾವು ಭಾರತೀಯ ಅನುಭಾವದಲ್ಲಿ ಇದಕ್ಕೆ ಉತ್ತರವನ್ನು ಪಡೆಯಬಹುದು. ಏಕೆಂದರೆ ಅದರ ಅಗ್ರೇಸರರು ವಿಜ್ಞಾನಕ್ಷೇತ್ರದಲ್ಲಿ ಹೇಗೋ ಹಾಗೆ, ಮೇಲಿನೆರಡರ ನಡುವಿನ ಅನಿವಾರ್ಯವಾದ ಮಿಲನವನ್ನು ಸಾಧಿಸಲು ನಡೆಯಬೇಕಾದ ದಿಕ್ಕನ್ನು ವಿಕಾಸಗೊಳಿಸಿದ್ದಾರೆ. ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರು ಜೊತೆಗೂಡಿರುವ ಈ ಆಧುನಿಕ ಜಾಗರಣದಿಂದ, ಪೌರ್ವಾತ್ಯ ಅನುಭಾವವು ವಿಜ್ಞಾನ ಮತ್ತು ತಾಂತ್ರಿಕತೆಗಳಿಂತ ಭಿನ್ನವಾದ ಸಾಂಸ್ಕೃತಿಕ ನೆಲೆಯಲ್ಲಿ ಪ್ರಕಟವಾದ ಜ್ಞಾನಾವರಣಗಳನ್ನು ಅಳವಡಿಸಿಕೊಳ್ಳಲು ಆರಂಭಿಸಿದೆ ಎನ್ನಬಹುದು. ಆದರೆ ಈ ಪ್ರಕ್ರಿಯೆಯಲ್ಲಿ ದೈವೀ ಘಟನೆಗಳ ಬಗೆಗಿನ ತನ್ನ ಸಾಂಪ್ರದಾಯಿಕ ಅರಿವನ್ನು ಅದು ತ್ಯಜಿಸಿಲ್ಲ.**

**–ಆ್ಯಮುರಿ ಡೆ ರೈನ್ ಕೋರ್ಟ್**

ಇಂದ್ರಿಯಾತೀತ ಅನುಭವವಾಗಿ 'ಅನುಭಾವ'

ಇಂದ್ರಿಯಗಳೊಡನೆ ನಾವು ತಾದಾತ್ಮ್ಯ ಹೊಂದಿದಾಗ, ಇಂದ್ರಿಯಾನುಭವವಾಗುತ್ತದೆ. ಆ ತಾದಾತ್ಮ್ಯವನ್ನು ತ್ಯಜಿಸಿದಾಗ ಇಂದ್ರಿಯಾತೀತ ಅನುಭವವಾಗುತ್ತದೆ. ಇಲ್ಲಿ ತಾದಾತ್ಮ್ಯವನ್ನು ಮಾಡಿಕೊಂಡಿರುವುದು ಮನುಷ್ಯನ 'ಅಹಂ' ಅಲ್ಲದೆ ಬೇರೇನೂ ಅಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದನ್ನು ಮೀರಿಹೋಗಿ, 'ಅಹಂ' ಲಯವಾಗುವುದೇ ಸಮಾಧಿ. ಶ್ರೀರಾಮಕೃಷ್ಣರು ನಡೆದಂತೆ ನುಡಿದವರು. ತಮ್ಮ ಅನುಭವವನ್ನೇ ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಹೇಳಿದರು. ಈ ವಿಷಯದಲ್ಲಿ ಅವರು ಹೇಳುವ ಮಾತು ಕೇಳೋಣ:

"ವೇದದಲ್ಲಿ ಹೇಳಿದೆ, ಮನಸ್ಸು ಸಪ್ತಮ ಭೂಮಿಕೆಯನ್ನು ಮುಟ್ಟಿತು ಎಂದರೆ, ಸಮಾಧಿಯುಂಟಾಗುತ್ತದೆ ಎಂದು... ಮನುಷ್ಯನ ಮನಸ್ಸು ಸಾಮಾನ್ಯವಾಗಿ ಎಲ್ಲಿ ನೆಲೆಸಿರುತ್ತದೆ, ಗೊತ್ತೇ? ಮೊದಲನೆಯ ಮೂರು ಭೂಮಿಕೆಗಳಲ್ಲಿ – ಲಿಂಗ, ಗುಹ್ಯ, ನಾಭಿ ಇವುಗಳಲ್ಲಿ. ಆಗ ಮನಸ್ಸಿನ ಆಸಕ್ತಿ ಕೇವಲ ಸಂಸಾರದಲ್ಲಿ, ಕಾಮಕಾಂಚನದಲ್ಲಿ. ಮನಸ್ಸು ಹೃದಯ ಭೂಮಿಕೆಗೆ ಹತ್ತಿ ನೆಲೆಸಿದಾಗ, ಮನಸ್ಸಿಗೆ ಭಗವಜ್ಜ್ಯೋತಿಯ ದರ್ಶನ ಆಗುತ್ತದೆ. ಮನುಷ್ಯ ಆ ಜ್ಯೋತಿಯನ್ನು ದರ್ಶಿಸಿದಾಗ, ವಿಸ್ಮಯಗೊಂಡು ಕೇಳುತ್ತಾನೆ: "ಆಹ! ಏನಿದು? ಏನಿದು?" ಬಳಿಕ ಕಂಠದ ಭೂಮಿಕೆ. ಅಲ್ಲಿಗೆ ಮನಸ್ಸು ಹತ್ತಿ ನೆಲೆಸಿದಾಗ ಕೇವಲ ಭಗವದ್ವಿಷಯವಾಗಿ ಕೇಳಲು, ಮಾತನಾಡಲು ಮಾತ್ರ ಇಚ್ಛೆಯಾಗುತ್ತದೆ. ಲಲಾಟಕ್ಕೆ (ಹಣೆ) ಅಂದರೆ ಭ್ರೂಮಧ್ಯಕ್ಕೆ ಮನಸ್ಸು ಹತ್ತಿ ನೆಲೆಸಿದರೆ, ಆಗ ಸಚ್ಚಿದಾನಂದನ ರೂಪ ದರ್ಶನ ಆಗುತ್ತದೆ. ಆತನನ್ನು ಸ್ಪರ್ಶಿಸಲು ಮತ್ತು ಆಲಿಂಗನ ಮಾಡಿಕೊಳ್ಳಲು ಇಚ್ಛೆಯಾಗುತ್ತದೆ. ಆದರೆ ಅದು ಸಾಧ್ಯವಾಗುವುದಿಲ್ಲ. ಇದು ಲಾಟೀನಿನ ಒಳಗಿರುವ ಬೆಳಕಿನ ಹಾಗೆ. ಅದನ್ನು ನೋಡಬಹುದೇ ಹೊರತು ಮುಟ್ಟಲಾಗುವುದಿಲ್ಲ. ಮುಟ್ಟಿಬಿಡೋಣ, ಮುಟ್ಟಿಬಿಡೋಣ ಎನ್ನಿಸುತ್ತದೆ. ಆದರೆ ಮುಟ್ಟಲಾಗುವುದಿಲ್ಲ. ಮನಸ್ಸು ಸಪ್ತಮ ಭೂಮಿಕೆಯನ್ನು ಮುಟ್ಟಿದಾಗ 'ಅಹಂ' ಎಂಬುದು ಉಳಿದಿರದು. ಆಗ ಮನುಷ್ಯ ಸಮಾಧಿಸ್ಥನಾಗುತ್ತಾನೆ."

ಅನಂತರ ಪರಮಹಂಸರು ಮುಂದುವರಿದು ಹೇಳುತ್ತಾರೆ: "ಸಪ್ತಮ ಭೂಮಿಕೆಯನ್ನು ಮುಟ್ಟಿದ ನಂತರ ಅಲ್ಲಿ ಏನಾಗುತ್ತದೆ ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ" (ಶ್ರೀರಾಮಕೃಷ್ಣ ವಚನವೇದ, ಪೂರ್ವಾರ್ಧ, ಪುಟ ೧೨೦ ).

ಇದನ್ನು ಮನಸ್ಸಿನ ಆಚೆಗೆ ಮೀರಿದ ಸ್ಥಿತಿಯೆಂದು ಕರೆಯುವುದಕ್ಕಿಂತಲೂ, ಶುದ್ಧ ಮನಸ್ಸಿನ ಸ್ಥಿತಿಯೆಂದು ಕರೆಯುವುದು ಉತ್ತಮವೆಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಅವರ ಪ್ರಕಾರ ಶುದ್ಧ ಮನಸ್ಸು, ಶುದ್ಧ ಬುದ್ಧಿ, ಶುದ್ಧ ಆತ್ಮ ಎಲ್ಲವೂ ಸಮಾನವಾದುವು. ಅವರು ಹೇಳುತ್ತಾರೆ: "ಕಾಮಿನೀ ಕಾಂಚನಗಳಲ್ಲಿ ಆಸಕ್ತವಾದ ಸಂಕುಚಿತ ಮನಸ್ಸು ಮತ್ತು ಸೀಮಿತವಾದ ಬುದ್ಧಿ ನಿಜವಾದ ದೇವರನ್ನು ತಿಳಿಯಲಾರವು. ಮನಸ್ಸನ್ನು ವಿಷಯವಸ್ತುಗಳಿಂದ ಬೇರ್ಪಡಿಸಿ, ಅಭ್ಯಾಸಬಲದಿಂದ ಅದನ್ನು ಶುದ್ಧಿಮಾಡಬಹುದು. ಆಸಕ್ತಿಗಳಿಂದ ದೂರವಾದ ಮನಸ್ಸು ಅವ್ಯಕ್ತವಾದ ಅಧ್ಯಾತ್ಮಕ್ಕೆ (ದೇಹದೊಳಗಿರುವ ಆತ್ಮ) ಸಮವಾಗುವುದು. ಹಿಂದಿನ ಕಾಲದ ಋಷಿಗಳು ದೇವರನ್ನು ನೋಡಿದುದು ಹೀಗೇ. ದೇವರನ್ನು, ಅವ್ಯಕ್ತವಾದ ಅಧ್ಯಾತ್ಮವನ್ನು ಅವರು ಶುದ್ಧವಾದ ಮನಸ್ಸಿನಿಂದ ನೋಡಿದರು. ಆ ಶುದ್ಧವಾದ ಮನಸ್ಸೇ ಆತ್ಮ ಅಥವಾ ಅವ್ಯಕ್ತದ ಅಂತರಾಳದಲ್ಲಿರುವ ಅಧ್ಯಾತ್ಮ" (ಶ್ರೀರಾಮಕೃಷ್ಣ ಉಪದೇಶಾಮೃತ, ೨೨೪).

ಈ ಮೇಲಿನ ಅನುಭವಗಳನ್ನು ಪರಮಹಂಸರು ತಾವೇ ಸ್ವತಃ ಪಡೆದುಕೊಂಡಿದ್ದರು ಎನ್ನುವುದು ನಿರ್ವಿವಾದ. ಸಪ್ತ ಭೂಮಿಕೆಗಳ ಬಗ್ಗೆ ಹೇಳುವಾಗ, ಕಂಠದ ಭೂಮಿಕೆಯ ಸಂದರ್ಭದಲ್ಲಿ ಅವರೇ ಹೀಗೆ ಹೇಳಿಕೊಳ್ಳುತ್ತಾರೆ: "ನಾನು ಆ ಸ್ಥಿತಿಯಲ್ಲಿದ್ದಾಗ ಯಾರಾದರೂ ಪ್ರಾಪಂಚಿಕ ಪ್ರಸಂಗಗಳನ್ನು ನನ್ನೆದರು ಆಡಲು ಬಾಯಿ ತೆರೆದರೆ, ತಲೆಯ ಮೇಲೆ ಏಟು ಕೊಟ್ಟಂತೆ ಆಗುತ್ತಿತ್ತು."

ಕುಂಡಲಿನಿಯ ವಿವಿಧ ಚಕ್ರಗಳ ಬಗ್ಗೆ ಹೇಳುವಾಗ, ಅವರು ಹೀಗೆ ಹೇಳುವರು, "ಕುಂಡಲಿನಿ ಮೂಲಾಧಾರದಲ್ಲಿ ಸುಪ್ತಾವಸ್ಥೆಯಲ್ಲಿರುವುದು. ಅದನ್ನು ಎಚ್ಚರಿಸಿದಾಗ, ಸುಷುಮ್ನಾ ಮೂಲಕ, ಸ್ವಾಧಿಷ್ಠಾನ, ಮಣಿಪೂರ ಮುಂತಾದ ಚಕ್ರಗಳ ಮೂಲಕ ಸಹಸ್ರಾರಕ್ಕೆ ಹೋಗುವುದು. ಆಗ ಸಮಾಧಿಯಾಗುವುದು. ನಾನು ಇವುಗಳನ್ನೆಲ್ಲ ಪ್ರತ್ಯೇಕವಾಗಿ ನೋಡಿದ್ದೇನೆ."

"ನನಗಾಗುವ ಎಲ್ಲ ಅನುಭವಗಳ ಬಗ್ಗೆ ಹೇಳಿಬಿಡೋಣ ಎಂದುಕೊಳ್ಳುತ್ತೇನೆ. ಆದರೆ ಯಾರೋ ನನ್ನ ಬಾಯಿಯನ್ನು ಕಟ್ಟಿಹಾಕಿದಂತಾಗುತ್ತದೆ" ಎಂದೂ ಅವರು ಹಲವಾರು ಬಾರಿ ಹೇಳಿದ್ದುಂಟು.

**ಅನುಭಾವವು ಐಕ್ಯಸ್ಥಿತಿ**

ದ್ವೈತ ಅನುಭವವು ವಿಕಲ್ಪ ಸ್ಥಿತಿ. ಅಲ್ಲಿ ಭೇದಗಳನ್ನು ಅನುಭವಿಸುತ್ತೇವೆ. ನಿರ್ವಿಕಲ್ಪ ಅನುಭವವು ಅಭೇದ ಸ್ಥಿತಿ. ಅಲ್ಲಿ ವಸ್ತುಗಳನ್ನು ನಾನು ಅನುಭವಿಸುತ್ತಿದ್ದೇನೆ ಎನ್ನುವ ಭಾವನೆಯೂ ನಾಶವಾಗಿ, ಕೇವಲ ಆ ವಸ್ತುವಿನ ಭಾವನೆ ಮಾತ್ರ ಉಳಿಯುತ್ತದೆ. ಅದನ್ನೇ ಯೋಗಶಾಸ್ತ್ರದಲ್ಲಿ **'ಅರ್ಥ ಮಾತ್ರ ನಿರ್ಭಾಸಾ"**, ಧ್ಯಾನಿಸುತ್ತಿರುವ ವಸ್ತುವಿನ ಭಾವನೆ ಮಾತ್ರವೇ ಮನಸ್ಸನ್ನು ಬೆಳಗುತ್ತಿರುತ್ತದೆ ಎಂದು ಹೇಳಲಾಗಿದೆ. ಪರಬ್ರಹ್ಮಚಿಂತನೆಯಲ್ಲಿಯೇ ಮುಳುಗಿ, ಮನಸ್ಸು ಅದರ ಭಾವವನ್ನೇ ತಳೆದಾಗ, ಸಮಾಧಿ ಉಂಟಾಗುತ್ತದೆ. ಇದೇ ಸ್ವಾಮಿ ವಿವೇಕಾನಂದರು ಹೇಳುವಂತೆ, ಆಧ್ಯಾತ್ಮಿಕ ಜೀವನದ ಪರಮೋಚ್ಚ ಸ್ಥಿತಿ. ಇಲ್ಲಿ 'ನಾನು' ಎಂಬ ಭಾವನೆಯೂ ಅಳಿದುಹೋಗಿ ಭಗವದ್ಭಾವವೊಂದೇ ಉಳಿಯುತ್ತದೆ.

ಶ್ರೀರಾಮಕೃಷ್ಣರನ್ನು ಒಬ್ಬರು ಪ್ರಶ್ನಿಸಿದರು: "ಸ್ವಾಮಿ, ಸಮಾಧಿಯಲ್ಲಿರುವಾಗ ನಿಮಗೆ ಸ್ವಲ್ಪವಾದರೂ 'ನಾನು' ಎಂಬ ಅರಿವು ಇರುತ್ತದೆಯೇ?" ಅದಕ್ಕೆ ಅವರು ಹೀಗೆ ಉತ್ತರಿಸಿದರು: "ಹೌದು, ಸಾಧಾರಣವಾಗಿ ಸ್ವಲ್ಪ ಅಹಂಕಾರ ಉಳಿಯುವುದು. ಆದರೆ ಕೆಲವು ವೇಳೆ ಅವನು (ಭಗವಂತ) ಇದನ್ನೂ ಓಡಿಸಿ ಬಿಡುವನು. ಇದು ಅತ್ಯುತ್ತಮ ಸಮಾಧಿ. ಆ ಸ್ಥಿತಿ ಏನೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ." ಪರಮಹಂಸರು ಇಲ್ಲಿ ಎರಡು ಬಗೆಯ ಸಮಾಧಿಗಳನ್ನು ಸೂಚಿಸುತ್ತಿದ್ದಾರೆ. ಸ್ವಲ್ಪ ಅಹಂಕಾರ ಉಳಿದು ಅದು ಭಗವದಾನಂದವನ್ನು ಅನುಭವಿಸುವ ಸ್ಥಿತಿ 'ಸವಿಕಲ್ಪ ಸಮಾಧಿ'ಯ ಸ್ಥಿತಿ. ಆ 'ಅಹಂ' ಕೂಡ ನಾಶವಾಗುವ ಸ್ಥಿತಿಯೇ 'ನಿರ್ವಿಕಲ್ಪ ಸಮಾಧಿ.'

ಶ್ರೀರಾಮಕೃಷ್ಣ ಪರಮಹಂಸರು ಈ ನಿರ್ವಿಕಲ್ಪ ಸ್ಥಿತಿಯಲ್ಲಿ ಸುಮಾರು ಆರು ತಿಂಗಳ ಕಾಲ ಇದ್ದರು. ತೋತಾಪುರಿಯಿಂದ ಉಪದೇಶ ಪಡೆದ ನಂತರದ ಅನುಭವವನ್ನು ಅವರ ಬಾಯಿಯಿಂದಲೇ ಕೇಳೋಣ:

"ಉಪದೇಶಾನಂತರ ತೋತಾಪುರಿ ಹಲವು ಅದ್ವೈತಪರವಾದ ಸಿದ್ಧಾಂತಗಳನ್ನು ನನಗೆ ಬೋಧಿಸಲು ಮೊದಲು ಮಾಡಿದನು. ಮನಸ್ಸನ್ನು ಎಲ್ಲ ಬಾಹ್ಯ ವಸ್ತುಗಳಿಂದ ಸೆಳೆದು ಆತ್ಮನ ಮೇಲೆ ಕೇಂದ್ರೀಕರಿಸುವಂತೆ ಹೇಳಿದನು. ಆದರೆ ನಾನು ಎಷ್ಟು ಪ್ರಯತ್ನಪಟ್ಟರೂ ನಾಮರೂಪಗಳ ಎಲ್ಲೆಯನ್ನು ದಾಟಿ ಅವ್ಯಕ್ತ ಸ್ಥಿತಿಗೆ ನನ್ನ ಮನಸ್ಸನ್ನು ಏರಿಸಲು ಸಾಧ್ಯವಾಗಲಿಲ್ಲ" (ನಂತರ ತೋತಾಪುರಿಯ ಒತ್ತಾಯದಿಂದ ಪರಮಹಂಸರು ಧ್ಯಾನವನ್ನು ಮಾಡಲು ಆರಂಭಿಸಿದರು).

"... ನಾನು ಪುನಃ ಶಪಥ ಮಾಡಿ, ಧ್ಯಾನಕ್ಕೆ ಕುಳಿತೆನು. ಜಗನ್ಮಾತೆಯ ದಿವ್ಯಸ್ವರೂಪ ಬಂದೊಡನೆಯೆ ವಿಚಾರಖಡ್ಗದಿಂದ ಅದನ್ನು ಎರಡಾಗಿ ಸೀಳಿದೆನು. ಆಗ ನನ್ನ ಮನಸ್ಸಿಗೆ ಇನ್ನು ಯಾವ ಆತಂಕವೂ ಇರಲಿಲ್ಲ. ತಕ್ಷಣವೇ ನನ್ನ ಮನಸ್ಸು ಕಾರ್ಯಕಾರಣ ಪ್ರಪಂಚವನ್ನು ದಾಟಿತು. ನಾನು ಸಮಾಧಿಯಲ್ಲಿ ಮಗ್ನನಾದೆ."

**ಅನುಭಾವದಲ್ಲಿ ಸಮಾನದೃಷ್ಟಿ**

ನಿರ್ವಿಕಲ್ಪ ಸಮಾಧಿಯು ಅನುಭಾವದ ಪರಮೋಚ್ಚ ಸ್ಥಿತಿ. ಅದಕ್ಕಿಂತ ಕೆಳಗಿನ ಹಂತಗಳಲ್ಲಿ ಅದರ ಪರಿಣಾಮವು ವಿವಿಧ ರೂಪದಲ್ಲಿ ಪ್ರತಿಫಲನಗೊಳ್ಳುತ್ತದೆ. ಅದು ಸರ್ವಜೀವಿಗಳಲ್ಲಿ ಸಮಾನ ದೃಷ್ಟಿಯನ್ನು, ಉನ್ನತ ಮಟ್ಟದ ತಾದಾತ್ಮ್ಯತೆಯನ್ನು ತಂದುಕೊಡುತ್ತದೆ. ಇದರ ಬಗ್ಗೆ ಶ್ರೀರಾಮಕೃಷ್ಣರೇ ಹೀಗೆ ಹೇಳುತ್ತಾರೆ: "ಸಮಾಧಿಯಿಂದ ಯಾರು ಇಂದ್ರಿಯಜ್ಞಾನಕ್ಕೆ ಬರುತ್ತಾರೋ ಅವರಲ್ಲಿ ಮಾತ್ರ, ತೆಳುವಾದ ಸರಳರೇಖೆಯಂತೆ, ಸ್ವಲ್ಪ ಅಹಂಕಾರ ಉಳಿದಿರುತ್ತದೆ. ಇದರಿಂದ ಅವನು ಜೀವ ಜಗತ್ತು ಮತ್ತು ತನ್ನ ಆತ್ಮ ಇವುಗಳೆಲ್ಲ ಒಂದೇ ಆಗಿ, ಪುನಃ ಹಲವು ರೂಪಗಳಾಗಿವೆ ಎಂಬುದನ್ನು ನೋಡಲು ಸಹಾಯಕವಾಗುವುದು."

ಈ ಸಮಾನದೃಷ್ಟಿಯ ಹಲವು ಬಗೆಯ ಅನುಭವಗಳು ಪರಮಹಂಸರಿಗೆ ಉಂಟಾದವು. ಅವುಗಳಲ್ಲಿ ಎರಡನ್ನು ಅವರ ಮಾತುಗಳಲ್ಲಿಯೇ ಆಲಿಸೋಣ:

"ಒಂದು ದಿನ ಒಂದೇ ವಸ್ತು ವಿಶ್ವದಲ್ಲಿರುವ ಎಲ್ಲ ಜೀವಿಗಳ ರೂಪವನ್ನು ಧಾರಣೆಮಾಡಿದಂತೆ ಕಂಡಿತು."

"ನಾನು ಏನನ್ನು ನೋಡುತ್ತೇನೆ, ನಿನಗೆ ಗೊತ್ತಿದೆಯೇ? ಅವನೇ ಎಲ್ಲದರಂತೆ ತೋರುವವನು. ಮನುಷ್ಯರು ಮತ್ತು ಇತರ ಪ್ರಾಣಿಗಳೆಲ್ಲ ತಲೆ ಅಲ್ಲಾಡಿಸಿ ಕೈಕಾಲುಗಳನ್ನು ಚಲಿಸುತ್ತಿರುವ ತೊಗಲಿನ ಬೊಂಬೆಗಳಂತೆ ಕಾಣುವುವು. ಆದರೆ ಅವುಗಳಲ್ಲೆಲ್ಲ ಭಗವಂತನು ಇರುವನು."

**ಅನುಭಾವವು ಅಪಾರ ಆನಂದವನ್ನೀಯುವ ಸ್ಥಿತಿ**

ಬ್ರಹ್ಮದ ಸ್ವರೂಪಲಕ್ಷಣಗಳಲ್ಲಿ 'ಆನಂದ'ವೂ ಒಂದು. **'ಆನಂದೋ ಬ್ರಹ್ಮೇತಿ ವ್ಯಜಾನಾತ್'** – ಆನಂದವೇ ಪರಬ್ರಹ್ಮವೆಂದು ತಿಳಿಯಬೇಕು ಎನ್ನುತ್ತದೆ ತೈತ್ತಿರೀಯ ಉಪನಿಷತ್ತು. ಜಗತ್ತಿನಲ್ಲಿ ಎಲ್ಲ ಆನಂದದ ಅನುಭವಗಳೂ ಈ ಬ್ರಹ್ಮಾನಂದದ ತೋರಿಕೆ ಮಾತ್ರ. ಶ್ರೀರಾಮಕೃಷ್ಣರು "ಬ್ರಹ್ಮನೇ ಎಲ್ಲವೂ ಆಗಿದ್ದಾನೆ. ಆದ್ದರಿಂದ ವಿಜ್ಞಾನಿಗೆ ಈ ಜಗತ್ತು ಒಂದು 'ಆನಂದ ಭವನ.' " ಎಂದು ಹೇಳುತ್ತಾರೆ. ಉಪ್ಪರಿಗೆಯನ್ನು ಹತ್ತಿಹೋಗಿ, ಉಪ್ಪರಿಗೆ, ಮೆಟ್ಟಿಲುಗಳೆಲ್ಲವೂ ಒಂದೇ ತರಹದ ಇಟ್ಟಿಗೆಗಳಿಂದ ಮಾಡಲ್ಪಟ್ಟಿವೆ ಎಂದು ಅರಿಯುವ ಹಾಗೆ, ವಿಜ್ಞಾನಿಯೂ ಸಮಾಧಿಯಲ್ಲಿ ಭಗವಂತನ ಅನುಭವವನ್ನು ಪಡೆದು, ಕೆಳಗಿಳಿದು ಬಂದು, ಜಗತ್ತಿನ ಎಲ್ಲ ವಸ್ತುಗಳಲ್ಲಿಯೂ, ವ್ಯಕ್ತಿಗಳಲ್ಲಿಯೂ ಭಗವಂತನ ಅಂಶವನ್ನೇ ಕಾಣುವನು. ಹಾಗೆಂದೇ 'ಬ್ರಹ್ಮಾನಂದ'ವನ್ನು ಅನುಭವಿಸಿದವನಿಗೆ ಜಗತ್ತೇ ಆನಂದಮಯವಾಗಿ ಕಾಣುವುದು.

ಪರಮಹಂಸರು ಪಂಡಿತ ಶಶಧರನಿಗೆ ಹೀಗೆ ಹೇಳಿದರು: "ನಿನಗೆ ಇದನ್ನು ತಿಳಿಸಬೇಕು ಅಂತ ಇದ್ದೇನೆ. ಆನಂದದಲ್ಲಿ ಮೂರು ವಿಧ – ವಿಷಯಾನಂದ, ಭಜನಾನಂದ, ಬ್ರಹ್ಮಾನಂದ.... ಭಗವಂತನ ನಾಮಗುಣಕೀರ್ತನೆಯಿಂದ ದೊರೆಯುವ ಆನಂದಕ್ಕೆ ಭಜನಾನಂದ ಎಂದು ಹೆಸರು. ಬ್ರಹ್ಮಾನಂದ ದೊರೆತ ನಂತರ ಹಿಂದಿನ ಕಾಲದ ಋಷಿಗಳು ಸಾಂಪ್ರದಾಯಿಕ ರೀತಿ–ನೀತಿಗಳ ಎಲ್ಲೆಯನ್ನು ದಾಟಿಹೋಗುತ್ತಿದ್ದರು." ಶ್ರೀರಾಮಕೃಷ್ಣರು ಹೇಳುತ್ತಾರೆ: "ರಾಮಪ್ರಸಾದ ಈ ಜಗತ್ತನ್ನು ಒಂದು 'ಮಾಯೆಯ ಚೌಕಟ್ಟು' ಎಂದು ವರ್ಣನೆ ಮಾಡಿದ. ಇನ್ನೊಬ್ಬ ಅದಕ್ಕೆ ಎದುರುತ್ತರ ಕೊಟ್ಟ:

"ಈ ಜಗವೆಂಬುದು ಮೋಜಿನ ಮನೆಯೋ!
ಇದರೊಳು ನಾ ಮನ ಬಂದೊಲು ನಡೆವೆ"

"ವಿಜ್ಞಾನಿ ಭಗವದಾನಂದವನ್ನು ವಿಶೇಷವಾಗಿ ಅನುಭವಿಸುತ್ತಾನೆ. ಕೆಲವರು ಹಾಲಿನ ಸಂಬಂಧವಾಗಿ ಕೇಳಿದ್ದಾರೆ, ಇನ್ನು ಕೆಲವರು ಅದನ್ನು ನೋಡಿದ್ದಾರೆ. ಮತ್ತೆ ಕೆಲವರು ಅದನ್ನು ಕುಡಿದಿದ್ದಾರೆ. ವಿಜ್ಞಾನಿ ಹಾಲನ್ನು ಕುಡಿದಿರುವುದೂ ಅಲ್ಲದೆ, ಕುಡಿದ ನಂತರ ಆನಂದವನ್ನೂ ಪಟ್ಟಿದ್ದಾನೆ, ಪುಷ್ಟನೂ ಆಗಿದ್ದಾನೆ."

ಇಲ್ಲಿ ನಾವು ಆಲಿಸುವ ವಿಜ್ಞಾನಿಯ ಸ್ಥಿತಿಯು ಶ್ರೀರಾಮಕೃಷ್ಣರ ಸಹಜ ಸ್ಥಿತಿಯಾಗಿತ್ತು ಎಂಬುದನ್ನು ನೆನಪಿಡಬೇಕು. ಹೀಗಾಗಿ ವಿಜ್ಞಾನಿಗೆ ಅತ್ಯುತ್ತಮ ನಿದರ್ಶನ ಶ್ರೀರಾಮಕೃಷ್ಣರೇ ಆಗಿದ್ದಾರೆ.

### ಅನುಭಾವವು ಪರಮಪ್ರೇಮದ ಸ್ಥಿತಿ

ನಮಗೆ ಅತ್ಯಂತ ಆನಂದವನ್ನು ಉಂಟುಮಾಡುವ ವ್ಯಕ್ತಿಯನ್ನೋ, ಸಂಗತಿಯನ್ನೋ ಪ್ರೀತಿಸುತ್ತೇವೆ. ಭಕ್ತಿಶಾಸ್ತ್ರದಲ್ಲಿ ಭಗವಂತನ ಮೇಲೆ ನಾವು ಮಾಡುವ ಪ್ರೇಮವನ್ನು, ಉನ್ನತ ಹಂತಗಳಿಗೆ ಒಯ್ಯುವುದೇ ಆಧ್ಯಾತ್ಮಿಕ ಸಾಧನೆಯೆಂದು ಹೇಳಲಾಗಿದೆ. ಅದು ತನ್ನ ಪರಾಕಾಷ್ಠೆಯನ್ನು ಪಡೆಯುವುದು ಪರಾಭಕ್ತಿಯ ಭಾವದಲ್ಲಿ. ಆಗ ಶ್ರೀರಾಮಕೃಷ್ಣರು ಹೇಳುವಂತೆ, ಪ್ರೇಮವೆನ್ನುವುದು ಮಾಗಿದ ಹಣ್ಣಿನಂತೆ.

ಅವರು ಇದನ್ನು ಹೀಗೆ ವಿವರಿಸುತ್ತಾರೆ: "ಪ್ರೇಮದ ಎರಡು ಗುಣಗಳಿವು: ಬಾಹ್ಯಪ್ರಪಂಚದ ಮರೆವು ಮತ್ತು ತನ್ನ ಸ್ವಂತ ದೇಹದ ಮರೆವು. ಎಲ್ಲೋ ಕೆಲವರು ಮಾತ್ರ ಪ್ರೇಮವನ್ನು ಪಡೆಯಬಲ್ಲರು. ಭಗವತ್ಕಾರ್ಯಕ್ಕಾಗಿ ಬಂದ, ಅದ್ಭುತಶಕ್ತಿಯಿಂದ ಕೂಡಿದ ಮಾನವರು ಅವರು. ಚೈತನ್ಯದೇವನಂತಹ ಅವತಾರಪುರುಷರು ಮತ್ತು ಪರಮಶ್ರೇಷ್ಠ ಭಕ್ತರಾದ ಅವರ ಅನುಯಾಯಿಗಳು ಈ ಗುಂಪಿಗೆ ಸೇರಿದವರು."

ಆ ಪ್ರೇಮವು ಪರಮ ಅನುಭಾವವಾಗಿ ತೋರ್ಪಡುವುದನ್ನು ರಾಧೆಯ ಮಹಾಭಾವದಲ್ಲಿ ಕಾಣುತ್ತೇವೆ; ಇಂತಹ ಅತ್ಯುತ್ಕೃಷ್ಟ ಭಾವವನ್ನೇ ಶ್ರೀರಾಮಕೃಷ್ಣರು ತಮ್ಮ ಮಧುರ ಭಾವನೆಯ ಸಮಯದಲ್ಲಿ ಹೊಂದಿದ್ದನ್ನು ಅವರ ಜೀವನದಲ್ಲಿ ನೋಡಬಹುದು.

ಅವತಾರಶ್ರೇಷ್ಠರಾದ ಶ್ರೀರಾಮಕೃಷ್ಣರು ತಾವು ಹಾದುಹೋದ ಮಹಾಭಾವದ ಸ್ಥಿತಿಯ ಬಗ್ಗೆ ಹೀಗೆ ಹೇಳಿಕೊಳ್ಳುವರು: "ಈ ಭಾವದಲ್ಲಿ ನಾನು ಸುಮಾರು ಮೂರು ದಿನಗಳು ಪ್ರಜ್ಞೆ ಇಲ್ಲದೆ ಇದ್ದೆ. ನನಗೆ ಓಡಾಡುವುದಕ್ಕೆ ಆಗುತ್ತಿರಲಿಲ್ಲ...ನನ್ನ ದೇಹವೆಲ್ಲ ಸುಡುತ್ತಿತ್ತು. ನನ್ನ ಬೆನ್ನುಮೂಳೆಗೆ ಒಂದು ದೊಡ್ಡ ಭರ್ಜಿಯನ್ನು ನಾಟಿದಂತೆ ಇತ್ತು... ಆದರೆ ಇದಾದನಂತರ ಯಾವಾಗಲೂ ಅತ್ಯಂತ ಆನಂದ ಪ್ರಾಪ್ತವಾಗುತ್ತಿತ್ತು."

### ಅನುಭಾವಿಯ ವಿಶ್ವವ್ಯಾಪಕ ಭಾವನಾಲಹರಿ

ಒಂದು ದಿನ ಶ್ರೀರಾಮಕೃಷ್ಣರು ನರೇಂದ್ರನನ್ನು ಕುರಿತು ಅವನ ಜೀವನದ ಆದರ್ಶವೇನೆಂದು ಪ್ರಶ್ನಿಸಿದರು. ಅದಕ್ಕೆ ನರೇಂದ್ರನು, "ಯಾವಾಗಲೂ ಸಮಾಧಿಯಲ್ಲಿ ಮಗ್ನನಾಗಿರುವುದು" ಎಂದನು. ಅದಕ್ಕೆ ಪರಮಹಂಸರು, "ಸಮಾಧಿಯನ್ನು ಮೀರಿ ಹೋಗು. ನಿನ್ನ ಸಮಾಧಿ ಕೆಲಸಕ್ಕೆ ಬಾರದ ವಸ್ತು" ಎಂದರು. ಮತ್ತೊಂದು ಸಲ, ಇದೇ ರೀತಿಯ ಪ್ರಶ್ನೆ ಕೇಳಿದರು. ನರೇಂದ್ರನಿಂದ ಅದೇ ರೀತಿಯ ಉತ್ತರ ಬಂದಿತು. ಅದಕ್ಕೆ ಶ್ರೀರಾಮಕೃಷ್ಣರು ಹೇಳಿದರು, "ಏತಕ್ಕೆ, ನಾನು ನಿನ್ನನ್ನು ಇನ್ನೂ ಉತ್ತಮನೆಂದು ತಿಳಿದಿದ್ದೆ. ಎಲ್ಲೋ ಒಂದು ಬಗೆಯ ಆದರ್ಶದೃಷ್ಟಿಯಿಂದ ನೀನು ಹೇಗೆ ತಾನೇ ತೃಪ್ತನಾಗಬಲ್ಲೆ? ಸಮಾಧಿಯಲ್ಲಿ ನಿರ್ಗುಣನಾದ ಅವ್ಯಕ್ತನಾದ ದೇವರನ್ನು ಅನುಭವಿಸುವುದು ಮಾತ್ರವಲ್ಲ, ಜೊತೆಗೆ ಅವನ ಅನೇಕ ದಿವ್ಯರೂಪಗಳನ್ನು ಮಧುರವಾದ ಮಾನವ ಸ್ವಭಾವದ ಮೂಲಕವೂ ನಾನು ಅನುಭವಿಸುತ್ತೇನೆ. ನೀನೂ ಕೂಡ ಹೀಗೆಯೇ ಮಾಡು. ಒಟ್ಟಿಗೆ ಜ್ಞಾನಿ ಮತ್ತು ಭಕ್ತನಾಗು."

ಶ್ರೀರಾಮಕೃಷ್ಣರು ತಮ್ಮ ಅನುಭಾವದ ಬೆಳಕಿನಲ್ಲಿ ವಿಶ್ವವ್ಯಾಪಕವಾದ ಭಾವನಾಲಹರಿಯನ್ನು ತಮ್ಮ ಜೀವನದಲ್ಲಿ ಪ್ರಕಟಮಾಡಿದರು. ತಮ್ಮ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಎಂಬ ಮಹಾನ್ ಗ್ರಂಥದಲ್ಲಿ ಸ್ವಾಮಿ ಶಾರದಾನಂದರು ಹೀಗೆ ಹೇಳುತ್ತಾರೆ: "ಭಾವಮಯರಾದ ಶ್ರೀರಾಮಕೃಷ್ಣರು ನಿರ್ವಿಕಲ್ಪ ಅದ್ವೈತ ಭಾವದಿಂದ ಹಿಡಿದು ಸವಿಕಲ್ಪದ ಎಲ್ಲ ರೀತಿಯ ಭಾವಗಳನ್ನೂ ತಮ್ಮ ಜೀವನದಲ್ಲಿ ಪ್ರಕಾಶಪಡಿಸಿದರು. ಹಾಗೆಂದೇ ಅವರು ಎಲ್ಲ ಬಗೆಯ ಭಕ್ತರಿಗೆ ಅವರವರ ಗುರಿಯನ್ನೂ, ಮಾರ್ಗವನ್ನೂ ತೋರಿಸಿಕೊಟ್ಟರು. ಅಂಧಕಾರದಲ್ಲಿರುವವರಿಗೆ ಬೆಳಕನ್ನೂ, ನಿರಾಶೆಯಿಂದ ತೊಳಲುವವರಿಗೆ ಆಶಾಕಿರಣವನ್ನೂ ಸಂಸಾರದ ದುಃಖದಿಂದ ಬೆಂದು ಬಳಲುತ್ತಿರುವವರಿಗೆ ಪರಮ ಶಾಂತಿಯನ್ನೂ ನೀಡಿದರು."

ಶ್ರೀರಾಮಕೃಷ್ಣರು ತಮ್ಮ ಅನುಭಾವದ ಬಲದಿಂದ ಆನಂದ ಮೂರ್ತಿಯಾಗಿದ್ದರಷ್ಟೇ ಅಲ್ಲದೆ, ಪ್ರೇಮಮೂರ್ತಿಯೂ ಆಗಿ

ದ್ದರು. ಅವರ ದಿವ್ಯಪ್ರೇಮದ ಅಮೃತವನ್ನು ಅವರ ಅಂತ ರಂಗದ ಯುವಶಿಷ್ಯರಲ್ಲದೆ, ಗೃಹಸ್ಥಭಕ್ತರೂ ಸವಿದರು. ಸ್ವಾಮಿ ವಿವೇಕಾನಂದರು, ಶ್ರೀರಾಮಕೃಷ್ಣರ ಪ್ರೇಮಪ್ರವಾಹವು ಅತ್ಯಂತ ಕನಿಷ್ಠತಮ ವ್ಯಕ್ತಿಯೆಂದು ಪರಿಗಣಿತನಾದವನ ಮೇಲೆಯೂ ಹರಿಯುತ್ತಿತ್ತು ಎಂದು ಸ್ತುತಿಸಿದ್ದಾರೆ. ಅವರ ಅನೇಕ ಭಕ್ತರು ಶ್ರೀರಾಮಕೃಷ್ಣರತ್ತ ತಮ್ಮನ್ನು ಆಕರ್ಷಿಸಿದ್ದು ಅವರ ನಿರ್ವ್ಯಾಜ ಪ್ರೇಮವೆಂದೇ ನೆನಪು ಮಾಡಿಕೊಳ್ಳುತ್ತಾರೆ.

ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರ ಪ್ರೇಮವನ್ನು ಕುರಿತು ಹೀಗೆ ಹೇಳುತ್ತಾರೆ: "ನಾನು ಶ್ರೀರಾಮಕೃಷ್ಣರನ್ನು ಪ್ರಥಮ ಬಾರಿಗೆ ನೋಡಿದಂದಿನಿಂದಲೂ ಎಲ್ಲಾ ಸಮಯ ದಲ್ಲಿಯೂ ಸಮಾನಭಾವದಿಂದ ನನ್ನಲ್ಲಿ ವಿಶ್ವಾಸವಿರಿಸಿದವರು ಅವರೊಬ್ಬರೇ ಹೊರತು ಮತ್ತಾರೂ ಅಲ್ಲ – ನನ್ನ ಸ್ವಂತ ತಾಯಿ ಸಹೋದರರು ಕೂಡ ಅಲ್ಲ. ಅವರು ಈ ಬಗೆಯ ಪ್ರೀತಿ, ವಿಶ್ವಾಸದಿಂದಲೇ ನನ್ನನ್ನು ಶಾಶ್ವತವಾಗಿ ಬಂಧಿಸಿರುವರು. ಅವರೊಬ್ಬರಿಗೆ ಮಾತ್ರ ಪ್ರೀತಿಸುವುದು ಹೇಗೆ ಎನ್ನುವುದು ಗೊತ್ತು. ಅವರೊಬ್ಬರಿಗೆ ಮಾತ್ರ ನಿಜವಾಗಿ ಪ್ರೀತಿಸುವುದು ಸಾಧ್ಯವಾಯಿತು. ಸಂಸಾರದಲ್ಲಿ ಇತರರೆಲ್ಲರೂ ಸ್ವಾರ್ಥ ಸಾಧನೆಗಾಗಿ ಪ್ರೀತಿಯ ಸೋಗು ಹಾಕಿಕೊಂಡು ತಿರುಗಾಡು ತ್ತಾರೆ."

**ಅನುಭಾವವು ತತ್ತ್ವಶಾಸ್ತ್ರಕ್ಕೂ ಧರ್ಮಕ್ಕೂ ಮೂಲ**

**'ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ, ಲಿಂಗಾನುಭವ ದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲ ಸಂಗಮದೇವಾ'** ಎಂದು ಭಕ್ತಿ ಭಂಡಾರಿ ಬಸವಣ್ಣನವರು ಹೇಳುತ್ತಾರೆ. ಇವರ ಪ್ರಕಾರ ಅನುಭಾವದ ಆಶ್ರಯವಿಲ್ಲದೆ, ಅರಿವಿಗೆ ಅಥವಾ ಜ್ಞಾನಕ್ಕೆ ತೃಪ್ತಿಯಾಗದು ಎಂದರೆ, ಪೂರ್ಣಜ್ಞಾನ ದೊರಕದು. ಅನುಭಾವವು ತತ್ತ್ವಶಾಸ್ತ್ರವು ಅರಸುವ 'ಸತ್ಯ' ದ ಅರಿವನ್ನು ತಂದುಕೊಡುವುದು; ಆ ಮೂಲಕ ಆ ಹುಡುಕಾಟದ ಅಂತಿಮ ಘಟ್ಟವಾಗಿರುವುದು.

ಶ್ರೀರಾಮಕೃಷ್ಣರು ಲೌಕಿಕ ದೃಷ್ಟಿಯಿಂದ 'ಪಂಡಿತ'ರಲ್ಲ ದಿದ್ದರೂ, ಅವರ ಅನುಭಾವವು ಅವರನ್ನು ಸತ್ಯದ್ರಷ್ಟಾರರನ್ನಾಗಿ ಮಾಡಿತ್ತು. ತಾರ್ಕಿಕನೊಬ್ಬನು ಒಂದು ಸಲ ಶ್ರೀರಾಮಕೃಷ್ಣರನ್ನು "ಜ್ಞಾತೃ, ಜ್ಞೇಯ, ಜ್ಞಾನವೆಂದರೇನು?" ಎಂದು ಕೇಳುತ್ತಾನೆ. ಅದಕ್ಕೆ ಶ್ರೀರಾಮಕೃಷ್ಣರು ತಮ್ಮ ಸರಳ ಶೈಲಿಯಲ್ಲಿ ಹೀಗೆ ಉತ್ತರಿಸುತ್ತಾರೆ: "ಸಭ್ಯ ಮಹಾಶಯರೇ, ಪಾಂಡಿತ್ಯದ ಇಂತಹ ಕಸರತ್ತು ನನಗೆ ಗೊತ್ತಿಲ್ಲ. ನನ್ನಲ್ಲಿರುವ ಆತ್ಮ ಮತ್ತು ಜಗನ್ಮಯಿ ಒಂದೇ – ಇಷ್ಟೇ ನನಗೆ ಗೊತ್ತಿರುವುದು."

ಶ್ರೀರಾಮಕೃಷ್ಣರು ಜ್ಞಾನದ ಆಕರಗಳೆಂದು ಕರೆಯುವ ವೇದ ವೇದಾಂತಗಳನ್ನೂ ತಮ್ಮ ಅನುಭಾವದ ಬಲದಿಂದ ಮೀರಿ ಹೋದರು. ಹೀಗಾಗಿ, ಅವರ ಬೋಧನೆಗಳಲ್ಲಿ ಶಾಸ್ತ್ರಗಳ ಸಂಪೂರ್ಣ ಒಳನೋಟ ಕಾಣಸಿಗುತ್ತದೆ. ಅಷ್ಟು ಮಾತ್ರವಲ್ಲ, ಸಾಂಪ್ರದಾಯಿಕ ತತ್ತ್ವಜಿಜ್ಞಾಸೆಯ ಇತಿಮಿತಿಗಳನ್ನೂ, ಪೂರ್ವಾಗ್ರಹ ಗಳನ್ನೂ ಮೀರಿಹೋಗಿರುವ 'ಸತ್ಯತತ್ತ್ವ' ದ ಸಮಗ್ರ ಮತ್ತು ಸರ್ವವ್ಯಾಪಕ ಅರಿವೂ ಅವುಗಳಲ್ಲಿ ಕಾಣಸಿಗುತ್ತದೆ. ಶ್ರೀರಾಮ ಕೃಷ್ಣರ ಅರಿವು, ಬಸವಣ್ಣರೆಂದಂತೆ, ಅನುಭಾವದ ಮೂಲಕ ಸಂಪೂರ್ಣ ತೃಪ್ತಿಗೊಂಡ ಅರಿವು.

ನಾವು ಸಾಧಾರಣವಾಗಿ 'ಧರ್ಮ'ವೆಂದು ಕರೆಯುವ ಆಚಾರ ವಿಚಾರಗಳಿಗೂ, ನೈತಿಕತೆ–ನಡವಳಿಕೆಗಳಿಗೂ ಅನುಭಾವವೇ ಆಶ್ರಯ. ಇಲ್ಲದಿದ್ದರೆ, ಅವು ಸಾಮಾಜಿಕ ಅಥವಾ ನಂಬುಗೆಯ ಕಟ್ಟುಪಾಡುಗಳ ನೆಲೆಯಿಂದ ಮೇಲೇಳುವುದೇ ಇಲ್ಲ. ಆದರೆ ಅನುಭಾವದ ಉನ್ನತ ಹಂತವನ್ನು ತಲುಪಲು, 'ಧರ್ಮ' ಮೆಟ್ಟಿಲಾಗಿರುವುದರಿಂದ ಅದು ಅತ್ಯಂತ ಅವಶ್ಯಕ. ಇದಕ್ಕೆ ಶ್ರೀರಾಮಕೃಷ್ಣರ ಜೀವನವೇ ಅತ್ಯಂತ ಉತ್ತಮ ನಿದರ್ಶನ. ಹಾಗೆಂದೇ ಸ್ವಾಮಿ ವಿವೇಕಾನಂದರು, ಮೂರ್ತಿಪೂಜೆಯು ಶ್ರೀರಾಮಕೃಷ್ಣರಂತಹ ಶ್ರೇಷ್ಠ ಆಧ್ಯಾತ್ಮಿಕಪುರುಷರನ್ನು ರೂಪಿಸಿರ ಬೇಕಾದರೆ, ಅದನ್ನು ತಪ್ಪೆಂದು ಹೇಳುವುದು ಮೂರ್ಖತನ ಎಂದು ಹೇಳುತ್ತಾರೆ. ಶ್ರೀರಾಮಕೃಷ್ಣರ ಅಪೂರ್ವ ದರ್ಶನ ಗಳು, ಅನುಭವಗಳು ಧಾರ್ಮಿಕ ಕ್ರಿಯೆಗಳಿಗೆ, ನಂಬಿಕೆ ಗಳಿಗೆ ಅಧಿಕೃತತೆಯನ್ನು ತಂದುಕೊಟ್ಟವು ಎಂದು ಹೇಳಬಹುದು. ಅದು ಬರಿ ಹಿಂದೂ ಧರ್ಮಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಕ್ರೈಸ್ತ ಮತ್ತು ಮುಸ್ಲಿಮ್ ಧರ್ಮಗಳ ಸಿದ್ಧಾಂತಗಳೂ ಶ್ರೀರಾಮ ಕೃಷ್ಣರು ಆಯಾ ಧರ್ಮಗಳ ಸಾಧನೆಯಿಂದ ಪಡೆದ ಸಿದ್ಧಿಯಿಂದ ಪರಿಪುಷ್ಟಿಯನ್ನು ಪಡೆದವು. ಹೀಗಾಗಿ ಇಡೀ ಜಾಗತಿಕ ಧಾರ್ಮಿಕ ರಂಗವನ್ನು ಶ್ರೀರಾಮಕೃಷ್ಣರ ಅನುಭವಗಳು ಸಶಕ್ತ ವನ್ನಾಗಿಯೂ, ಸತ್ವಭರಿತವನ್ನಾಗಿಯೂ ಮಾಡಿದವು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

**ಉಪಸಂಹಾರ**

ಶ್ರೀರಾಮಕೃಷ್ಣರ ವ್ಯಕ್ತಿತ್ವವು ಸಾಗರದಷ್ಟೇ ಗಹನವಾದುದು, ಆಗಸದಷ್ಟೇ ವಿಶಾಲವಾದುದು. ಅದು ಹತ್ತುಹಲವು ಮುಖ ಗಳಿಂದ ಕೂಡಿದ್ದು, ಪ್ರತಿಯೊಂದು ಮುಖವೂ ತನ್ನದೇ ಆದ ವೈಶಿಷ್ಟ್ಯದಿಂದ, ದಿವ್ಯಪ್ರಭೆಯಿಂದ ಬೆಳಗುತ್ತಿರುವುದು. ಈ ಎಲ್ಲ ಮುಖಗಳಿಗೆ ಶಕ್ತಿಸಂಚಾಲಕನಂತೆ ಇರುವುದು ಅವರ ಆಧ್ಯಾತ್ಮಿಕ ಔನ್ನತ್ಯ. ಅದೇ ಅರಿವಿನ ಅನುಭಾವವಾಗಿ, ಅವರು ಹಾದುಹೋದ ಅಸಂಖ್ಯಾತ ದರ್ಶನಗಳು, ಭಾವಗಳು, ಅತೀಂದ್ರಿಯ ಅನುಭವಗಳು, ದೇವದೇವಿಯರ ನೋಟಗಳು – ಇವುಗಳ ಮೂಲಕ ಕಾಣಿಸಿಕೊಂಡಿತು. ಇತರ ಎಲ್ಲ ಅವತಾರ ಗಳಿಗಿಂತ ರಾಮಕೃಷ್ಣಾವತಾರವನ್ನು 'ವರಿಷ್ಠ' ವನ್ನಾಗಿಯೂ, 'ವಿಶಿಷ್ಟ' ವನ್ನಾಗಿಯೂ ಮಾಡಿರುವುದು ಈ ಅನುಭಾವವೇ. ಹೀಗೆ ಅವರು 'ಅವತಾರವರಿಷ್ಠ'ರು ಮಾತ್ರವಷ್ಟೇ ಅಲ್ಲ, 'ಅನುಭಾವಿವರಿಷ್ಠ' ರೂ ಕೂಡ!